# ನೋಟಿಸು

## ರಾಮಾಯಣ–ಮಹಾಭಾರತ ಕಾವ್ಯಗಳನ್ನಾಧರಿಸಿ ಲಿಖಿತ ಪರೀಕ್ಷೆ

## (Objective Type Written Test on Ramayan and Mahabharat)

ನಮ್ಮ ಮಹಾವಿದ್ಯಾಲಯದ ಎಲ್ಲ ವಿದ್ಯಾರ್ಥಿಗಳಿಗೆ ತಿಳಿಸುವುದೇನೆಂದರೆ,

ವಿಜಯಪುರ ಜಿಲ್ಲಾ ಮಟ್ಟದ ರಾಮಾಯಣ–ಮಹಾಭಾರತ ಕಾವ್ಯಗಳನ್ನಾಧರಿಸಿ ಲಿಖಿತ ಪರೀಕ್ಷೆಯನ್ನು ನಮ್ಮ ಮಹಾವಿದ್ಯಾಲಯವು ಪದವಿ (B.A/B.Sc/B.C.A) ವಿದ್ಯಾರ್ಥಿಗಳಿಗೆ ಸಂಸ್ಕೃತ ವಿಭಾಗ ಮತ್ತು ಹೆರಿಟೇಜ್ ಕ್ಲಬ್ ವತಿಯಿಂದ ನೈತಿಕ ಮೌಲ್ಯವನ್ನು ಬೆಳೆಸುವ ಉದ್ದೇಶದಿಂದ ನಿಗದಿ ಪಡಿಸಿದ ಪುಸ್ತಕವನ್ನಾಧರಿಸಿ ವಸ್ತುನಿಷ್ಠ (Objective type) ಪ್ರಶ್ನೆಗಳಿಗೆ ಉತ್ತರ ಬರೆಯುವ ಸ್ಪರ್ಧೆಯನ್ನು ಏರ್ಪಡಿಸಲಾಗುವುದು. ಕಾರಣ ಆಸಕ್ತ ವಿದ್ಯಾರ್ಥಿಗಳು ಮುಂಜಾನೆ 10.30 ರಿಂದ 12.00 ಗಂಟೆಯವರೆಗೆ ಮಹಾವಿದ್ಯಾಲಯದ ಎನ್.ಎಸ್.ಎಸ್ ವಿಭಾಗದಲ್ಲಿ ನೋಂದಣಿ ಮಾಡಿಕೊಳ್ಳಲಾಗುವುದು.

**–: ಪರೀಕ್ಷಾ ನಿಯಮಗಳು :–**

- ಈ ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳು 10=00ರೂ.ಗಳನ್ನು ಕೊಟ್ಟು ದಿನಾಂಕ 25.1.2020 ರೊಳಗಾಗಿ ನೋಂದಣಿ ಮಾಡಿಸಬೇಕು.
- ನೊಂದಣಿ ಮಾಡಿದ ವಿದ್ಯಾರ್ಥಿಗಳು 15=00ರೂ.ಗಳನ್ನು ಕೊಟ್ಟು ಕ್ವಿಜ್ ಪುಸ್ತಕವನ್ನು ಪಡೆಯಬೇಕು. ನೋಂದಣಿ ಮಾಡಿದ ವಿದ್ಯಾರ್ಥಿಗಳಿಗೆ ಮಾತ್ರ ಪರೀಕ್ಷೆಗೆ ಅವಕಾಶ.
- ಪರೀಕ್ಷೆಯನ್ನು ಶುಕ್ರವಾರ ದಿನಾಂಕ 31.1.2020 ರಂದು, ಮುಂಜಾನೆ 10.30ರಿಂದ 11.30ರ ವರೆಗೆ ನಮ್ಮ ಮಹಾವಿದ್ಯಾಲಯದ ಸೆಮಿನಾರ್ ಹಾಲಿನಲ್ಲಿ ನಡೆಸಲಾಗುವುದು.

**ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಕ್ರಮವಾಗಿ**

1) ಮೊದಲನೆಯ ಬಹುಮಾನ ರೂ.2000
2) ಎರಡನೆಯ ಬಹುಮಾನ ರೂ.1500
3) ಮೂರನೆಯ ಬಹುಮಾನ ರೂ.1250
4) ನಾಲ್ಕನೆಯ ಬಹುಮಾನ ರೂ.750
5) ಐದನೆಯ ಬಹುಮಾನ ರೂ.500

ಹಾಗೂ ಪರೀಕ್ಷೆಗೆ ಹಾಜರಾದ ಎಲ್ಲ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ನೀಡಲಾಗುವುದು.

ಪ್ರಾಚಾರ್ಯರು

Principal,
S. B. Arts & KCP Sc. College,
Bijapur

---

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ**

ಪ್ರೊ.ಜಿ.ಆರ್.ಅಂಬಲಿ
ಮುಖ್ಯಸ್ಥರು, ಸಂಸ್ಕೃತ ವಿಭಾಗ
9448646371

ಪ್ರೊ(ಶ್ರೀಮತಿ)ವಿದ್ಯಾ.ಪಾಟೀಲ
ಅಧ್ಯಕ್ಷರು, ಹೆರಿಟೇಜ್ ಕ್ಲಬ್
7411146450

**ಬಿ.ಎಲ್.ಡಿ.ಈ ಸಂಸ್ಥೆಯ ಎಸ್.ಬಿ ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯ**

**ವಿಜಯಪುರ**

## ಸಂಸ್ಕೃತ ವಿಭಾಗ ಮತ್ತು ಹೆರಿಟೇಜ್ ಕ್ಲಬ್

ಇವರ ಸಹಯೋಗದಲ್ಲಿ

## "ರಾಮಾಯಣ-ಮಹಾಭಾರತ ಕಾವ್ಯಗಳನ್ನಾಧರಿಸಿ ವಸ್ತುನಿಷ್ಠ ಲಿಖಿತ ಪರೀಕ್ಷೆ"

(31-01-2020)

---

ಸಂಸ್ಕೃತ ವಿಭಾಗ ಮತ್ತು ಹೆರಿಟೇಜ್ ಕ್ಲಬ್ ಇವರ ಸಹಯೋಗದಲ್ಲಿ ವಿಜಯಪುರ ಜಿಲ್ಲೆಯ ಪದವಿ ವಿದ್ಯಾರ್ಥಿಗಳಿಗೆ "ರಾಮಾಯಣ-ಮಹಾಭಾರತ ಕಾವ್ಯಗಳನ್ನಾಧರಿಸಿ ವಸ್ತುನಿಷ್ಠ ಲಿಖಿತ ಪರೀಕ್ಷೆ"ಯನ್ನು ಏರ್ಪಡಿಸಲಾಗಿದ್ದರು.

ಸಾಹಿತ್ಯ-ಸಂಸ್ಕೃತಿ ಜೀವನದ ಪ್ರತಿಬಿಂಬ, ಇಂತಹ ಅಮೂಲ್ಯವಾದ ಸಂಸ್ಕೃತಿಯನ್ನು ಬೀರುವ ರಾಮಾಯಣ ಮತ್ತು ಮಹಾಭಾರತ ಕಾವ್ಯಗಳು ಪ್ರಸ್ತುತ ದಿನಮಾನಗಳಲ್ಲಿ ಯುವ ಜನತೆಗೆ ನೀತಿ ಸಂಹಿತೆಯನ್ನು ಸಾರುವ ಏಕೈಕ ಸಾಧನವಾಗಿದೆ ಎಂದು ನಿವೃತ್ತ ಪ್ರೊ. ಬನುದೇವಿ ಸಂಕನ್ನವರ್ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಪ್ರೊ. ಯು. ಎಸ್. ಪೂಜಾರಿ ಅವರು ವಿದ್ಯಾರ್ಥಿಗಳನ್ನ ಉದ್ದೇಶಿಸಿ ಅಧ್ಯಕ್ಷೀಯ ನುಡಿಗಳನ್ನಾಡಿ, ವಿದ್ಯಾರ್ಥಿಗಳಲ್ಲಿ ಸ್ಪರ್ಧಾ ಮನೋಭಾವದ ಜೊತೆಗೆ ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸುವಲ್ಲಿ ಈ ಒಂದು ಪರೀಕ್ಷೆ ಮಾರ್ಗದರ್ಶನವಾಗಲಿದೆ ಮತ್ತು ಮಕ್ಕಳಲ್ಲಿ ತಂದೆ-ತಾಯಿಯರ ಮೇಲೆ ಗೌರವ ಮೂಡಿಸುವಲ್ಲಿ ಈ ಪೌರಾಣಿಕ ಕಥೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ ಎಂದು ತಿಳಿಸಿದರು.

ಸ್ಪರ್ಧೆಯಲ್ಲಿ 348 ವಿಧ್ಯಾರ್ಥಿಗಳು ಹಾಜರಾಗಿದ್ದರು. ಅದರಲ್ಲಿ ವಿಜೇತರಾದ ಐದು ವಿದ್ಯಾರ್ಥಿಗಳಿಗೆ ಒಟ್ಟು ರೂ.6000 ನಗದು ಬಹುಮಾನವನ್ನು ವಿತರಣೆ ಮಾಡಲಾಯಿತು. ಈ ಕಾರ್ಯಕ್ರಮಕ್ಕೆ ಅನೇಕ ಪ್ರಾಧ್ಯಾಪಕರು ಪ್ರೊತ್ಸಾಹ ರೂಪವಾಗಿ 6000 ರುಪಾಯಿಗಳನ್ನು ನೀಡಿದ್ದರು. ಪ್ರಥಮ ಬಹುಮಾನ ಕುಮಾರಿ ಲಕ್ಷ್ಮೀ ಮಜ್ಜಗಿ

(ಎಸ್.ಬಿ.ಕಲಾ ಹಾಗೂ ಕೆ.ಸಿ.ಪಿ.ವಿಜ್ಞಾನ ಮಹಾವಿದ್ಯಾಲಯ), ದ್ವಿತೀಯ ಬಹುಮಾನ ರಾಣಿ ತವಸೆ(ಎಸ್.ಬಿ.ಕಲಾ ಹಾಗೂ ಕೆ.ಸಿ.ಪಿ.ವಿಜ್ಞಾನ ಮಹಾವಿದ್ಯಾಲಯ), ತೃತೀಯ ಬಹುಮಾನ ವಿಜಯಲಕ್ಷ್ಮೀ ಹಚಡದ (ಬಂಗಾರಮ್ಮ ಸಜ್ಜನ ಕಾಲೇಜ್), ನಾಲ್ಕನೇಯ ಬಹುಮಾನ ಮಲ್ಲಿಕಾರ್ಜುನ ಕೊರೆ (ಎಸ್.ಬಿ.ಕಲಾ ಹಾಗೂ ಕೆ.ಸಿ.ಪಿ.ವಿಜ್ಞಾನ ಮಹಾವಿದ್ಯಾಲಯ), ಐದನೇ ಬಹುಮಾನ ಮೇಘಾ ಮಸೂತಿ (ಬಂಗಾರಮ್ಮ ಸಜ್ಜನ ಕಾಲೇಜ್ ವಿಜಯಪುರ) ಬಹುಮಾನ ಪಡೆದುಕೊಂಡರು.

ಈ ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ವಿವಿಧ ಮಹಾವಿದ್ಯಾಲಯದಿಂದ ಆಗಮಿಸಿದ ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ವ್ಯಕ್ತ ಪಡಿಸಿದರು. ಈ ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಸಾಂಸ್ಕೃತಿಕ ಮತ್ತು ಕ್ರೀಡಾ ಅಧ್ಯಕ್ಷ ಪ್ರೊ. ಈ.ಆರ್.ಅಂಬಲಿ, ಹೆರಿಟೇಜ್ ಕ್ಲಬ್‌ನ ಅಧ್ಯಕ್ಷೆ ಪ್ರೊ. ವಿದ್ಯಾ ಪಾಟೀಲ್ ಮತ್ತು ಎಲ್ಲಾ ವಿದ್ಯಾರ್ಥಿಗಳು ಮತ್ತು ವಿವಿಧ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಮಹಾವಿದ್ಯಾಲಯದ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗವು ಉಪಸ್ಥಿತರಿದ್ದರು.

ಪ್ರೊ. ಬಿ. ಬಿ.ಡೆಂಗನವರ್ ಸ್ವಾಗತಿಸಿದರು ಮತ್ತು ಪರಿಚಯಿಸಿದರು. ಪ್ರೊ. ಉಷಾದೇವಿ ಹಿರೇಮಠ ಅವರು ವಂದಿಸಿ, ನಿರೂಪಿಸಿದರು.









| Sl No | Name of the Students | Prize | College |
|---|---|---|---|
| 1 | ಕುಮಾರಿ ಲಕ್ಷ್ಮೀ ಮಜ್ಜಗಿ | ಪ್ರಥಮ | ಎಸ್.ಬಿ.ಕಲಾ ಹಾಗೂ ಕೆ.ಸಿ.ಪಿ.ವಿಜ್ಞಾನ ಮಹಾವಿದ್ಯಾಲಯ |
| 2 | ರಾಣಿ ತವಸೆ | ದ್ವಿತೀಯ | ಎಸ್.ಬಿ.ಕಲಾ ಹಾಗೂ ಕೆ.ಸಿ.ಪಿ.ವಿಜ್ಞಾನ ಮಹಾವಿದ್ಯಾಲಯ |
| 3 | ವಿಜಯಲಕ್ಷ್ಮೀ ಹಚಡದ | ತೃತೀಯ | ಬಂಗಾರಮ್ಮ ಸಜ್ಜನ ಕಾಲೇಜ್ |
| 4 | ಮಲ್ಲಿಕಾರ್ಜುನ ಕೋರೆ | ನಾಲ್ಕನೇಯ | ಎಸ್.ಬಿ.ಕಲಾ ಹಾಗೂ ಕೆ.ಸಿ.ಪಿ.ವಿಜ್ಞಾನ ಮಹಾವಿದ್ಯಾಲಯ |
| 5 | ಮೇಘಾ ಮಸೂತಿ | ಐದನೇ | ಬಂಗಾರಮ್ಮ ಸಜ್ಜನ ಕಾಲೇಜ್ |

Principal

Principal,
S. B. Arts & KCP Sc. College,
Bijapur

IQAC, Co-ordinator
S.B.Arts & K.C.P.Science College,
Vijayapur.

HOD